**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ25-06-2026**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಎಂ.ವಕೀಲರಿಂದ**

ನಾನು 30-40 ವರ್ಷಗಳಿಂದ ಎಲ್.ಐ.ಸಿ. ಏಜೆಂಟ್ ಆಗಿ ಕೆಲಸ ಮಾಡಿರುತ್ತೇನೆ. ಈಗ ಒಂದು ವರ್ಷದಿಂದ ಏಜೆಂಟ್ ಆಗಿ ಕೆಲಸ ಮಾಡುತ್ತಿಲ್ಲ. ಏಜೆಂಸ್ಸಿಯ ಕಮೀಷನ್ ನನ್ನ ಖಾತೆಗೆ ಬರುತ್ತದೆ ಎಂದರೆ ಸರಿ. ನನ್ನ ಬ್ಯಾಂಕ್ ಖಾತೆಗೆ ಬಂತಂಹ ಕಮಿಷನ್ ಡಿಟೇಲ್ಸ್ ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನನಗೆ ವಾರ್ಷಿಕವಾಗಿ 6 ರಿಂದ 7ಲಕ್ಷಗಳವರೆಗೆ ಕಮೀಷನ್ ಬರುತ್ತಿತ್ತು. ಆ ಬಗ್ಗೆ ನಾನು ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ. ಸದರಿ ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ನನ್ನ ಆಯ-ವ್ಯಯಗಳ ಬಗ್ಗೆ ನಮೂದು ಆಗಿರುತ್ತದೆ ಎಂದರೆ ಸರಿ. ಆರೋಪಿಗೆ ನೀಡಿರುತ್ತೇನೆ ಎಂದು ಹೇಳಲಾದ ಮೊತ್ತದ ಬಗ್ಗೆ ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ಹೇಳಿರುವುದಿಲ್ಲ. ಆ ಬಗ್ಗೆ ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ. ನಾನು ಕಾಫಿ ಪ್ಲಾಂಟರ್ಸ್ ಟ್ರೇಡಿಂಗ್ ಕಂಪನಿಯ ಸದಸ್ಯನಾಗಿರುವುದಿಲ್ಲ.

ನನ್ನ ಹೆಸರಿನಲ್ಲಿ 4 ಎಕರೆ 38 ಗುಂಟೆ ಮತ್ತು ನನ್ನ ಮಗನ ಹೆಸರಿನಲ್ಲಿ 3 ಎಕರೆ 13 ಗುಂಟೆ ಕಾಫಿ ಪ್ಲೆಂಟೇಷನ್ ಇದ್ದು, ನಾನೇ ಅದನ್ನು ನೋಡಿಕೊಳ್ಳುತ್ತೇನೆ. ಆ ಬಗ್ಗೆ ಆರ್.ಟಿ.ಸಿ.ಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುವುದಿಲ್ಲ, ಅಗತ್ಯವಿದ್ದಲ್ಲಿ ಅದನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ಕಾಫಿ ಮಾರಾಟದಿಂದ ಬಂದ ಹಣ ನನ್ನ ಖಾತೆಗೆ ಜಮೆ ಆಗುತ್ತದೆ. ಆ ಬಗ್ಗೆ ಖಾತಾ ಎಕ್ಸ್**ಟ್ರ್ಯಾಕ್ಟ್** ನ್ನು ಹಾಜರು ಪಡಿಸಿರುವುದಿಲ್ಲ. ಅದನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ಆರೋಪಿಗೆ ಚೆಕ್ ಮೂಲಕ ಹಣ ಕೊಡಲು ನನಗೆ ತೊಂದರೆ ಇರಲಿಲ್ಲ.

ಆರೋಪಿ ಮೊದಲಿಗೆ ಹೇಮಾವತಿ ನಗರದಲ್ಲಿ ವಾಸವಾಗಿದ್ದರು. ಈಗ ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ದೊಡ್ಡಪ್ಪನ ಮನೆಯ ಹತ್ತಿರ ನಾವು ವಾಸವಾಗಿದುದರಿಂದ ನನಗೆ ಆರೋಪಿಯ ಪರಿಚಯವಾಗಿರುತ್ತದೆ. ಆರೋಪಿ ಈಗ ಬಾಳ್ಳುಪೇಟೆಯಲ್ಲಿ ವಾಸವಾಗಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಆರೋಪಿ ಹೇಮಾವತಿ

ನಗರದಲ್ಲಿದ್ದ ಮನೆಯನ್ನು ಬ್ಯಾಂಕ್ ನವರು ಹರಾಜು ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಹೇಮಾವತಿ ನಗರದಲ್ಲಿ ಆರೋಪಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವ್ಯವಹಾರವಾದ ನಂತರ ಎಲ್ಲಿ ವಾಸವಿರುತ್ತಾರೆ ಎಂದು ನನಗೆ ಗೊತ್ತಾಗಿರುವುದಿಲ್ಲ ಮತ್ತು ಅವರು ಫೋನ್ ಕರೆಗೂ ಸಹ ಸಿಕ್ಕಿರುವುದಿಲ್ಲ. ಆರೋಪಿಯ ವಿಳಾಸವನ್ನು ತೆಗೆದುಕೊಂಡು ಅವರಿಗೆ ನೋಟೀಸು ಕಳುಹಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಅವರು ಎಲ್ಲಿ ಇದ್ದರು ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ನಮ್ಮ ರಾಯರಕೊಪ್ಪಲಿನಲ್ಲಿರುವ ತೋಟಕ್ಕೆ ಬಂದು ಹಣ ಕೇಳಿಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ನನ್ನನ್ನು ಮತ್ತು ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಆರೋಪಿಯು ಈ ವಿವಾದಿತ ವ್ಯವಹಾರವನ್ನು ಹೊರತುಪಡಿಸಿ ಅದಕ್ಕಿಂತ ಪೂರ್ವದಲ್ಲಿ ನನ್ನೊಂದಿಗೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿರಲಿಲ್ಲ. ಆರೋಪಿಗೆ ಹಣ ಸಾಲ ನೀಡುವ ಮೊದಲು ಅವರ ಆರ್ಥಿಕ ಸಾಮರ್ಥ್ಯದ ಬಗ್ಗೆ ತಿಳಿದುಕೊಂಡಿರುತ್ತೇನೆ. ಆರೋಪಿಯ ತಂದೆಗೆ ಹಾಸನದಲ್ಲಿ ಜಮೀನು ಮತ್ತು ಆರೋಪಿಗೆ ಸ್ವಂತ ಮನೆ, ಈಟಾಚಿ, ಕಾರು, ಟಿಪ್ಪರ್, ಪಿಕ್ ಆಪ್ ಇರುತ್ತದೆ. ಅವರ ಮಾಸಿಕ ಆದಾಯದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ.

ಹೇಮಾವತಿ ನಗರದಲ್ಲಿ ಆರೋಪಿ, ಅವರ ಹೆಂಡತಿ ಮತ್ತು ಮಗನೊಂದಿಗೆ ವಾಸವಾಗಿದ್ದರು. ರೂ.10ಲಕ್ಷ ಸಾಲ ನೀಡಲು ನನಗೆ ಆರ್ಥಿಕ ಸಾಮರ್ಥ್ಯ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆರೋಪಿಗೆ ನೀಡಿದ ರೂ.10ಲಕ್ಷ ಸಾಲದ ಬಗ್ಗೆ ನನ್ನ ಆದಾಯ ತೆರಿಗೆ ವರದಿಯಲ್ಲಿ ಹೇಳದೆ ಇರುವುದರಿಂದ ನೀವು ಆದಾಯ ತೆರಿಗೆ ಇಲಾಖೆಗೆ ಮೋಸ ಮಾಡಿರುತ್ತೀರಿ ಎಂದರೆ ಸಾಕ್ಷಿದಾರರು ನನ್ನ ಕೃಷಿಯಿಂದ ಬಂದ ಆದಾಯವನ್ನು ಮನೆ ಕಟ್ಟಲು ಇಟ್ಟುಕೊಂಡಿದ್ದರಿಂದ ಸದರಿ ಹಣವನ್ನು ಆರೋಪಿಗೆ ನೀಡಿದ್ದರಿಂದ ಆದಾಯ ತೆರಿಗೆ ವರದಿಯಲ್ಲಿ ಆ ಬಗ್ಗೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1ನ್ನು ರಾಯರಕೊಪ್ಪಲಿನಲ್ಲಿ ನೀಡಿರುತ್ತಾರೆ. ನಿಪಿ-1ನ್ನು ಆರೋಪಿಯೇ ಬರೆದಿರುತ್ತಾರೆ. ಆರೋಪಿ ನನ್ನ ಸಮಕ್ಷಮದಲ್ಲಿ ನಿಪಿ-1ಕ್ಕೆ ಸಹಿ ಮಾಡಿರುತ್ತಾರೆ. ನಿಪಿ-1ರಲ್ಲಿರುವ ಬರವಣಿಗೆಗೂ ಮತ್ತು ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-1ನ್ನು ತಜ್ಞರ ಅಭಿಪ್ರಾಯಕ್ಕೆ ಕಳುಹಿಸಲು ನನಗೆ ತೊಂದರೆ ಇಲ್ಲ. ನಿಪಿ-1ರಲ್ಲಿ ಬರವಣಿಗೆ ಮತ್ತು ಸಹಿಗೆ ವ್ಯತ್ಯಾಸ ಇದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ01/08/2017ರಂದು ಆರೋಪಿ ಹಣ ಪಡೆದುಕೊಳ್ಳುವ ಒಂದು ದಿನ ಮುಂಚಿತವಾಗಿ ನನ್ನ ಬಳಿ ಹಣ ಬೇಕೆಂದು ಕೇಳಿರುತ್ತಾರೆ. ಈ ವಿಚಾರವನ್ನು ನನ್ನ ಪಿರ್ಯಾದಿನಲ್ಲಿ ಹೇಳಿರುವುದಿಲ್ಲ. ಚೆಕ್ಕನ್ನು ಸಹ ಅದೇ ದಿನ ನನಗೆ ನೀಡಿರುತ್ತಾರೆ. ನಾನು ಸಾಲವನ್ನು ಬಡ್ಡಿಗೆ ನೀಡಿರುವುದಿಲ್ಲ. ವಿಶ್ವಾಸದಿಂದ ಕೊಟ್ಟಿರುತ್ತೇನೆ. ರೂ.10ಲಕ್ಷ ಹಣವನ್ನು ಠೇವಣಿ ಇಟ್ಟಲ್ಲಿ ಹಿರಿಯ ನಾಗರೀಕರಿಗೆ 8% ಬಡ್ಡಿ ಸಿಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನೀನ್ನೂ ಹಿರಿಯ ನಾಗರೀಕನಾಗಿರಲಿಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಹಣವನ್ನು ಖಾತೆಯಿಂದ ಬಿಡಿಸಿಕೊಂಡಿರುತ್ತೇನೆ ಎಂದು ನನಗೆ ನೆನಪಿಲ್ಲ. 2016ರಲ್ಲಿ ಕೇಂದ್ರ ಸರ್ಕಾರದಿಂದ ರೂ.500/-, ರೂ.1,000/- ಮುಖಬೆಲೆಯ ನೋಟುಗಳನ್ನು ಬ್ಯಾನ್ ಮಾಡಿರುತ್ತಾರೆ ಎಂದರೆ ಸರಿ. ಆದರೆ ಯಾವ ಸಮಯದಲ್ಲಿ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ನೋಟುಗಳನ್ನು ಬ್ಯಾಂಕ್ ನಿಂದ ಬದಲಾಯಿಸಿಕೊಳ್ಳಬೇಕಾಗಿತ್ತು ಎಂದರೆ ಸರಿ. ರೂ.10ಲಕ್ಷವನ್ನು ಬ್ಯಾಂಕಿನಿಂದ ಬದಲಾಯಿಸಿಕೊಂಡಿರುವ ಬಗ್ಗೆ ಈಗ ನನಗೆ ನೆನಪಿಲ್ಲ. ಆ ಬಗ್ಗೆ ಬ್ಯಾಂಕಿನಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿದಾರರು ನಾನು ರೂ.10ಲಕ್ಷವನ್ನು ಒಟ್ಟಿಗೆ ಬಿಡಿಸಿಕೊಂಡಿರುವುದಿಲ್ಲ, ಸ್ವಲ್ಪ ಸ್ವಲ್ಪ ಹಣವನ್ನೇ ಕೂಡಿ ಇಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 2016ರ ನಂತರ ನನ್ನ ಖಾತೆಯಲ್ಲಿ ರೂ.10ಲಕ್ಷ ಟ್ರಾನ್ಸ್ಆಕ್ಷನ್ ಆಗಿರುವ ಬಗ್ಗೆ ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸರಿ.

ಹೇಮಾವತಿ ನಗರದಲ್ಲಿ ಆರೋಪಿ ವಾಸವಾಗಿಲ್ಲ ಎಂದು ಗೊತ್ತಿದ್ದರೂ ಸಹ ನೀವು ಅವರಿಗೆ ನೋಟೀಸು ನೀಡಿರುತ್ತೀರಿ ಎಂದರೆ ಸಾಕ್ಷಿದಾರರು ನೋಟೀಸು ನೀಡಿದ್ದು ನಿಜ, ಆದರೆ ಮೊದಲಿಗೆ ಹೇಮಾವತಿ ನಗರದಲ್ಲಿದ್ದು ನಂತರ ಅಲ್ಲಿಂದ ತಪ್ಪಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 10-11 ವರ್ಷಗಳ ಹಿಂದೆ ಆರೋಪಿ ತಪ್ಪಿಸಿಕೊಂಡು ಹೋಗಿದ್ದು, ಅವರನ್ನು ಪುನಃ ನ್ಯಾಯಾಲಯದಲ್ಲಿಯೇ ನೋಡಿರುತ್ತೇನೆ. ಆರೋಪಿ ತಪ್ಪಿಸಿಕೊಂಡು ಹೋಗಿರುವ ಬಗ್ಗೆ ದೂರನ್ನು ನೀಡಿರುವುದಿಲ್ಲ. ಆರೋಪಿಯನ್ನು ಪತ್ತೆ ಹಚ್ಚಲು ನಾನು ಪ್ರಯತ್ನ ಮಾಡಿರುವುದಿಲ್ಲ. ಹೇಮಾವತಿ ನಗರದಲ್ಲಿ ಆರೋಪಿ ವಾಸವಾಗಿಲ್ಲ ಎಂದು ಗೊತ್ತಿದ್ದರೂ ಸಹ ಅವರ ವಿರುದ್ಧ ವಾರೆಂಟ್ ಜಾರಿಯಾಗುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.10ಲಕ್ಷ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿಯ ಸೋದರ ಮಾವನ ಪರಿಚಯ ಇದೆ. ಆರೋಪಿಯ ಸೋದರ ಮಾವ ಕೆಂಪೇಗೌಡರವರು ಆರೋಪಿಯ ವಿರುದ್ಧ ಕೇಸು ದಾಖಲು ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಆರೋಪಿ ಕೆಂಪೇಗೌಡರಿಗೆ ಎಷ್ಟು ಹಣ ನೀಡಲು ಬಾಕಿ ಇದೆ ಎಂದು ನನಗೆ ಗೊತ್ತಿಲ್ಲ.

ಕೆಂಪೇಗೌಡ ನನಗೆ 30 ವರ್ಷಗಳಿಂದ ಪರಿಚಯ. ನನಗೆ ಕೆಂಪೇಗೌಡರ ವ್ಯವಹಾರದ ಬಗ್ಗೆ ಗೊತ್ತಿಲ್ಲ. ಕೆಂಪೇಗೌಡರಿಗೆ ಆರೋಪಿ ನನಗೆ ರೂ.10ಲಕ್ಷ ಕೊಡಲು ಬಾಕಿ ಇರುವ ಬಗ್ಗೆ ಹೇಳಿರುತ್ತೇನೆ. ಸಾಲ ಕೊಡುವ ಮೊದಲು ಆರೋಪಿಯ ಬಗ್ಗೆ ಕೆಂಪೇಗೌಡರ ಬಳಿ ವಿಚಾರಿಸಿದ್ದೀರಾ ಎಂದರೆ ಕೆಂಪೇಗೌಡರೇ ಆರೋಪಿಗೆ ಹಣ ಕೊಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನಾ ನನ್ನ ಪಿರ್ಯಾದಿನಲ್ಲಿ ಹೇಳಿರುವುದಿಲ್ಲ. ನಾನು ಮತ್ತು ಕೆಂಪೇಗೌಡರು ಸೇರಿ ಆರೋಪಿಯ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ರೂ.10ಲಕ್ಷ ಸಾಲ ನೀಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

ನನ್ನ ಹೆಸರಿನಲ್ಲಿ ಸ.ನಂ.53/1ರಲ್ಲಿ 15 ಗುಂಟೆ, ಸ.ನಂ.53/2ರಲ್ಲಿ 15 ಗುಂಟೆ, ಸ.ನಂ.54ರಲ್ಲಿ 2 ಎಕರೆ 38 ಗುಂಟೆ ಜಾಗ ಇದೆ. ಸದರಿ ಸ್ವತ್ತನ್ನು ಅಡಮಾನ ಇಟ್ಟು ಬ್ಯಾಂಕಿನಿಂದ ಸಾಲ ಪಡೆದುಕೊಂಡಿರುತ್ತೇನೆ. ನಾನು ಪ್ಲಾಂಟರ್ಸ್ ಬ್ಯಾಂಕ್ ನಿಂದ ರೂ.3ಲಕ್ಷ ಸಾಲವನ್ನು ಪಡೆದಿರುತ್ತೇನೆ. ನನ್ನ ಮಗ ಕೆನರಾ ಬ್ಯಾಂಕ್ ನಿಂದ ರೂ.4ಲಕ್ಷ ಸಾಲ ಪಡೆದಿರುತ್ತಾನೆ. ಕೃಷಿ ಅಭಿವೃದ್ಧಿಗಾಗಿ ಸದರಿ ಸಾಲವನ್ನು ಪಡೆದುಕೊಂಡಿರುತ್ತೇವೆ. ನನ್ನ ಬಳಿ ಹಣ ಇಲ್ಲದೆ ಇದುದರಿಂದ ಬ್ಯಾಂಕಿನಿಂದ ಸಾಲ ಪಡೆದಿರುತ್ತೇನೆ ಎಂದರೆ ಸರಿ. ಸದರಿ ಸಾಲವನ್ನು ಮರುಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿದಾರರು ಅದು ಬೆಳೆ ಸಾಲ ಆಗಿದ್ದರಿಂದ ಪ್ರತಿ ವರ್ಷ ಅದನ್ನು ನವೀಕರಣಗೊಳಿಸುತ್ತೇವೆ. ಸದರಿ ಸಾಲದ ಬಗ್ಗೆ ನನ್ನ ಆದಾಯ ತೆರಿಗೆ ವರದಿಯಲ್ಲಿ ಹೇಳಿರುತ್ತೇನೆ. ಸದರಿ ಆದಾಯ ತೆರಿಗೆ ವರದಿಯನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಆರೋಪಿಗೆ ಯಾವುದೇ ಸಾಲ ನೀಡದೇ ಇದ್ದರೂ ಸಹ ನಾನು ಕೆಂಪೇಗೌಡರು ಶಾಮೀಲಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1ರ ಚೆಕ್ ಯಾರ ಬಳಿ ಇತ್ತು ಎಂದು ಆರೋಪಿಗೆ ಗೊತ್ತಿರಲಿಲ್ಲ ಎಂದರೆ ಸಾಕ್ಷಿದಾರರು ಆರೋಪಿ ನನಗೆ ಕೊಟ್ಟು ಹೋಗಿದ್ದರು ಎಂದು ನುಡಿಯುತ್ತಾರೆ. ಆರೋಪಿಗೆ ಸರಿಯಾದ ವಿಳಾಸಕ್ಕೆ ನೋಟೀಸು ಜಾರಿಯಾಗಿದ್ದರೆ ಅವರು ಸದರಿ ನೋಟೀಸಿಗೆ ಉತ್ತರ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ನೋಟೀಸು ಜಾರಿಯಾಗದೆ ಇದುದರಿಂದ ಅವರು ಪ್ರತ್ಯುತ್ತರ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪೋಸ್ಟ್ ಮ್ಯಾನ್ ನ ಮೂಲಕ ಸುಳ್ಳು ಷರಾ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-5ರಲ್ಲಿ ಆರೋಪಿಯನ್ನು ಗುರ್ತಿಸಿರುವ ಬಗ್ಗೆ ಷರಾ ಇರುವುದಿಲ್ಲ ಎಂದರೆ ಸರಿಯಲ್ಲ. ಪೋಸ್ಟ್ ಆಫೀಸ್ ಬಗ್ಗೆ ನನಗೆ ಮಾಹಿತಿ ಇಲ್ಲ. ಪೋಸ್ಟ್ ಆರ್ಟಿಕಲ್ ಗಳ ಬಗ್ಗೆ ರಿಜಿಸ್ಟರ್ ಇರುವ ಬಗ್ಗೆ ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-5ರ ವಿಚಾರವಾಗಿ ಪೋಸ್ಟ್ ಮ್ಯಾನ್ ನ್ನು ಕರೆಯಿಸಿ ಸಾಕ್ಷ್ಯ ವಿಚಾರಣೆ

ಮಾಡಿಸುವುದಾದರೆ ನನಗೆ ತೊಂದರೆ ಇಲ್ಲ. ಪೋಸ್ಟ್ ಮ್ಯಾನ್ ಬಳಿ ಎಲ್ಲಾ ವಿವರಗಳು ಇರುವ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೆ ಕೇ ಸ ಇ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**